## <u>ಶ್ರೀ ಯೇಸು ನಾಮ</u>

ಶ್ರೀ ಯೇಸು ನಾಮ ಅತಿಶಯ ನಾಮ
ಪಾಪಿಗೆ ಇಂಪಾದ ನಾಮ

ಪಾಪದ ಪರಿಹಾರಕ್ಕಾಗಿ ಪಾಪಿಗಳ ಹುಡುಕಿ
ಧರಣಿಗೆ ಬಂದ ನಾಮ
ಪಾಪ ರಹಿತ ಜೀವಿತದಿ ಮಾದರಿಯ ತೋರಿಸಿದ
ಪರಿಶುದ್ಧ ಪುಣ್ಯ ನಾಮ – ಹಲ್ಲೆಲೂಯ

ಎಲ್ಲಾ ನಾಮದಲ್ಲಿಯೂ ಮೇಲಾ ನಾಮ
ಯೇಸುವಿನ ದಿವ್ಯ ನಾಮ
ಸರ್ವಜನರೆಲ್ಲಾ ಅಡ್ಡಬಿದ್ದು ಸ್ತೋತ್ರ ಮಾಡಿ
ಹರ್ಷದಿಂದ ಹಾಡುವ ನಾಮ – ಹಲ್ಲೆಲೂಯ

ಲೆಕ್ಕವಿಲ್ಲದಷ್ಟು ಪಾಪ ನನ್ನಿಂದ ತೆಗೆಯಲು
ನನಗಾಗಿ ಬಂದ ನಾಮ
ಅನ್ಯನೆಂದು ತಳ್ಳದೆನ್ನ ಧನ್ಯನಾಗಿ ಮಾಡಲು ಬಂದ
ಉನ್ನತನ ಪುಣ್ಯ ನಾಮ

ಭೂತ ಬಾಧಿತರಿಗೆ ನಾನಾ ರೋಗಿಗಳಿಗೆ
ಸ್ವಸ್ಥ ಮಾಡುವಂಥ ನಾಮ
ಕುರುಡರಿಗೂ ಕುಂಟರಿಗೂ ಕುಷ್ಟರೋಗಿಗಳಿಗೆಲ್ಲಾ
ಬಿಡುಗಡೆ ಕೊಡುವ ನಾಮ